ಪ್ರಾಬ್ಲಮ್ ಇಲ್ಲ. ಯಾರ influence, ಯಾರ ಮುಲಾಜು, ಯಾವ ರಾಜಕಾರಣವು ಬೇಡ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡಲಿ.

**ಶ್ರೀ ಸಿ.ಹೆಚ್.ವಿಜಯಶಂಕರ:** ಮಾನ್ಯ ಅಧ್ಯಕ್ಷರೆ, ನನಗೂ ಕೂಡ ಯಾವುದೇ ಮುಲಾಜು ಇಲ್ಲ. ಈ ಎಲ್ಲಾ ವಿಷಯಗಳನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ನಾನು ಬದ್ಧನಾಗಿದ್ದೇನೆ. ಈ ಸಂಪತ್ತನ್ನು ಕಾಪಾಡುವುದಕ್ಕೆ ಎಲ್ಲಾ ರೀತಿಯ ನಿರ್ದಾಕ್ಷಿಣ್ಯ ಕ್ರಮಗಳನ್ನು ನಾನು ತೆಗೆದುಕೊಳ್ಳುತ್ತೇನೆ.

**ದ.ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಮೂಲಭೂತ ಸೌಕರ್ಯ**

159(1121) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಬೀಡಿ ತಯಾರಿಕಾ ಕೈಗಾರಿಕೆಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ; ಅವು ಯಾವುವು ;

ಆ) ಬೀಡಿ ಕಾರ್ಮಿಕ ಕುಟುಂಬಗಳ ವಾಸಕ್ಕಾಗಿ ಸರ್ಕಾರ ಮನೆಗಳನ್ನು ನಿರ್ಮಿಸಿಕೊಡಲು ಉದ್ದೇಶಿಸಿದೆಯೇ ;

ಇ) ಹಾಗಿದ್ದಲ್ಲಿ, ಯಾವ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲಾಗುವುದು ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 85 ಬೀಡಿ ತಯಾರಿಕಾ ಕೈಗಾರಿಕೆಗಳಲ್ಲಿ ಬೀಡಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಪರಿಷ್ಕೃತ ಸಮಗ್ರ ವಸತಿ ಯೋಜನೆ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ.

## ಅನುಬಂಧ

| ಕ್ರ.ಸಂ. | ಸಂಸ್ಥೆಯ ಹೆಸರು |
|---|---|
| 1. | ಭಾರತ್ ಬೀಡಿ, ಕದ್ರಿ ಮಂಗಳೂರು |
| 2. | ಭಾರತ್ ಬೀಡಿ, ತಲಪಾಡಿ |
| 3. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಮಂಗಳೂರು |
| 4. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಮೂಡಬಿದ್ರೆ |
| 5. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಪಾಣೆಮಂಗಳೂರು |
| 6. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಬಿ.ಸಿ. ರೋಡ್ |
| 7. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಫರಂಗಿಪೇಟೆ |
| 8. | ಎಸ್.ಕೆ. ಹೋಮ್ ಇಂಡಸ್ಟ್ರೀಸ್, ಸುರತ್ಕಲ್ |
| 9. | ಪಿ.ವಿ.ಎಸ್. ಬೀಡೀಸ್ ಪ್ರೈ ಲಿ., ಕೊಡಿಯಾಲ್ ಬೈಲ್, ಮಂಗಳೂರು |
| 10. | ವಿವೇಕ್ ಸ್ನಫ್ & ಬೀಡಿ ವರ್ಕ್ಸ್, ಮೂಲ್ಕಿ |
| 11. | ದೀಪಕ್ ಎಂಟರ್‌ಪ್ರೈಸಸ್, ಪುತ್ತೂರು |
| 12. | ದೀಪಕ್ ಎಂಟರ್‌ಪ್ರೈಸಸ್, ವಿಟ್ಲ |
| 13. | ದೀಪಕ್ ಎಂಟರ್‌ಪ್ರೈಸಸ್, ಉಪ್ಪಿನಂಗಡಿ |
| 14. | ದೀಪಕ್ ಎಂಟರ್‌ಪ್ರೈಸಸ್, ಸುಳ್ಯ |
| 15. | ಗಣೇಶ್ ಬೀಡಿ ವರ್ಕ್ಸ್, ಲೇಬಲಿಂಗ್ |
| 16. | ಭಾರತ್ ಬೀಡಿ, ಕುದ್ರೋಳಿ, ಮಂಗಳೂರು |
| 17. | ಭಾರತ್ ಬೀಡಿ, ಸುರತ್ಕಲ್ |
| 18. | ಭಾರತ್ ಬೀಡಿ, ಉಳ್ಳಾಲ |
| 19. | ಭಾರತ್ ಬೀಡಿ, ಕಾರ್ನಾಡ್ ಮೂಲ್ಕಿ |
| 20. | ಭಾರತ್ ಬೀಡಿ, ಮೂಡಬಿದ್ರೆ |

| | |
|---|---|
| 21. | ಭಾರತ್ ಬೀಡಿ, ಬೆಳ್ತಂಗಡಿ |
| 22. | ಭಾರತ್ ಬೀಡಿ, ಪುತ್ತೂರು |
| 23. | ಭಾರತ್ ಬೀಡಿ, ಬಿ.ಸಿ. ರೋಡ್ |
| 24. | ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್, ಮಂಗಳೂರು |
| 25. | ಪ್ರಕಾಶ್ ಬೀಡಿ, ಕೊಡಿಯಾಲ್ ಬೈಲು, ಮಂಗಳೂರು |
| 26. | ಆನಂದ ಟೊಬೇಕೋ ಪ್ರಾಡಕ್ಸ್, ಬೈಕಂಪಾಡಿ |
| 27. | ಎಸ್.ಎಂ. ಜೈನ್, ಮೂಡಬಿದ್ರೆ |
| 28. | ಎಸ್.ಎಂ. ಜೈನ್, ಉಳ್ಳಾಲ |
| 29. | ಎಸ್.ಎಂ. ಜೈನ್, ಬೆಳ್ತಂಗಡಿ |
| 30. | ಎಸ್.ಎಂ. ಜೈನ್, ಪುತ್ತೂರು |
| 31. | ಗುರುಕೃಪಾ ಬೀಡಿ, ಬಂಟ್ವಾಳ |
| 32. | ಗುರುಕೃಪಾ ಬೀಡಿ, ಉಳ್ಳಾಲ |
| 33. | ಸಿ.ಜೆ. ಟೊಬೆಕ್ಕೊ ಪ್ರಾಡಕ್ಸ್, ಉಳ್ಳಾಲ |
| 34. | ಸಿ.ಜೆ. ಟೊಬೆಕ್ಕೊ ಪ್ರಾಡಕ್ಸ್, ಉಪ್ಪಿನಂಗಡಿ |
| 35. | ಸದರ್ನ್ ಇಂಡಿಯಾ ಬೀಡಿ ವರ್ಕ್ಸ್, ಪುತ್ತೂರು |
| 36. | ಸದರ್ನ್ ಇಂಡಿಯಾ ಬೀಡಿ ವರ್ಕ್ಸ್, ಉಳ್ಳಾಲ |
| 37. | ಸದರ್ನ್ ಇಂಡಿಯಾ ಬೀಡಿ ವರ್ಕ್ಸ್, ಪಾಣೆ ಮಂಗಳೂರು |
| 38. | ಸದರ್ನ್ ಇಂಡಿಯಾ ಬೀಡಿ ವರ್ಕ್ಸ್, ಮೂಡಬಿದ್ರೆ |
| 39. | ಸದರ್ನ್ ಇಂಡಿಯಾ ಬೀಡಿ ವರ್ಕ್ಸ್, ಉಪ್ಪಿನಂಗಡಿ |
| 40. | ಮಧುರ ಬೀಡಿ ವರ್ಕ್ಸ್, ಪುತ್ತೂರು |
| 41. | ಮಂಗಳೂರು ನಸೀಮಾ ಬೀಡಿ, ಕಣ್ಣೂರು, ಮಂಗಳೂರು |
| 42. | ಮಂಗಳೂರು ಆಶೋಕ್ ಬೀಡಿ, ಕಣ್ಣೂರು, ಮಂಗಳೂರು |

| | |
|---|---|
| 43. | ಮಂಗಳೂರು ಕಿಸಾನ್ ಬೀಡಿ, ಕಣ್ಣೂರು, ಮಂಗಳೂರು |
| 44. | ಜೆ.ಕೆ. ಬೀಡಿ, ಕಣ್ಣೂರು, ಮಂಗಳೂರು |
| 45. | ಪಿ.ಕೆ.ಟಿ.ಪಿ. ಕೇಂದ್ರ ಕಛೇರಿ, ತಾರೆತೋಟ, ಕುಲಶೇಖರ ಪೋಸ್ಟ್, ಮಂಗಳೂರು |
| 46. | ಪಿ.ಕೆ.ಟಿ.ಪಿ., ಉಳ್ಳಾಲ |
| 47. | ಪಿ.ಕೆ.ಟಿ.ಪಿ., ಫರಂಗಿಪೇಟೆ |
| 48. | ಪಿ.ಕೆ.ಟಿ.ಪಿ., ಪಾಣೆ ಮಂಗಳೂರು |
| 49. | ಪಿ.ಕೆ.ಟಿ.ಪಿ., ಕೈಕಂಬ |
| 50. | ಪಿ.ಕೆ.ಟಿ.ಪಿ., ಸೋಮೇಶ್ವರ |
| 51. | ಪಿ.ಕೆ.ಟಿ.ಪಿ., ಮೂಡಬಿದ್ರೆ |
| 52. | ಪಿ.ಕೆ.ಟಿ.ಪಿ., ಮೂಲ್ಕಿ |
| 53. | ಪಿ.ಕೆ.ಟಿ.ಪಿ., ಉಪ್ಪಿನಂಗಡಿ |
| 54. | ಸಿ.ಜೆ. ಟೊಬೆಕ್ಕೊ ಪ್ರಾಡಕ್ಸ್, ಉಪ್ಪಿನಂಗಡಿ |
| 55. | ಸಿ.ಜಿ. ಟೊಬೆಕ್ಕೋ ಪ್ರಾಡಕ್ಸ್, ಉಳ್ಳಾಲ |
| 56. | ಜೆ.ಪಿ. ಟೊಬೆಕ್ಕೊ ಪ್ರಾಡಕ್ಟ್, ಉಪ್ಪಿನಂಗಡಿ |
| 57. | ಜೆ.ಪಿ. ಟೊಬೆಕ್ಕೊ ಪ್ರಾಡಕ್ಸ್, ಬೆಳ್ತಂಗಡಿ |
| 58. | ಪ್ರಭು ಬೀಡಿ ವರ್ಕ್ಸ್, ಬಂಟ್ವಾಳ |
| 59. | ಸತೀಶ್ ಬೀಡಿ ವರ್ಕ್ಸ್, ಬಂಟ್ವಾಳ |
| 60. | ಶುಭ ಬೀಡಿ ವರ್ಕ್ಸ್, ಪಚ್ಚಿನಡ್ಕ, ಬಂಟ್ವಾಳ ತಾ |
| 61. | ಕರ್ನಾಟಕ ಬೀಡಿ ವರ್ಕ್ಸ್, ಶಾಂತಿ ಅಂಗಡಿ, ಬಿ.ಸಿ.ರೋಡ್, ಬಂಟ್ವಾಳ ತಾ |
| 62. | ಬಜಾರ್ ಬೀಡಿ ವರ್ಕ್ಸ್, ಮಾರ್ನಮಿಕಟ್ಟೆ, ಪಾಣೆ, ಮಂಗಳೂರು |
| 63. | ಅಲಂಕಾರ್ ಬೀಡಿ ವರ್ಕ್ಸ್, ಫರಂಗಿಪೇಟೆ, ಬಂಟ್ವಾಳ ತಾ |

| | |
|---|---|
| 64. | ಸುಲ್ತಾನ್ ಬೀಡಿ ವರ್ಕ್ಸ್, ಕೊಡಾಜೆ, ಮಾಣಿ, ಬಂಟ್ವಾಳ ತಾ |
| 65. | ಪ್ರೀತಿ ಬೀಡಿ ವರ್ಕ್ಸ್, ಬೊಳಂತೂರು, ಬಂಟ್ವಾಳ |
| 66. | ಸಿಂಗಾರಿ ಬೀಡಿ, ಬೊಳಂತೂರು, ಬಂಟ್ವಾಳ |
| 67. | ಕೆ.ಎಸ್. ಬೀಡಿ ವರ್ಕ್ಸ್, ಕಲ್ಲಡ್ಕ, ಬಂಟ್ವಾಳ |
| 68. | ಮಹಾಲಕ್ಷ್ಮಿ ಬೀಡಿ ವರ್ಕ್ಸ್, ಪಾಣೆ ಮಂಗಳೂರು |
| 69. | ನಜಾರ್ ಬೀಡಿ, ಪಾಣೆ ಮಂಗಳೂರು |
| 70. | ಮಂಗಳೂರು ಹಜಾಜ್ ಬೀಡಿ ವರ್ಕ್ಸ್, ಕಲ್ಲಡ್ಕ |
| 71. | ಅಮರ್ ಬೀಡಿ ವರ್ಕ್ಸ್, ಗೋಳ್ತಮಜಲು, ಬಂಟ್ವಾಳ |
| 72. | ಸಿತಾರ್ ಬೀಡಿ ವರ್ಕ್ಸ್, ಕಣ್ಣೂರು, ಮಂಗಳೂರು |
| 73. | ಮಂಗಳೂರು ಪವನ್ ಬೀಡಿ ವರ್ಕ್ಸ್, ಪಡೀಲ್, ಮಂಗಳೂರು |
| 74. | ಜವಾನ್ ಬೀಡಿ ವರ್ಕ್ಸ್, ಕೃಷ್ಣಾಪುರ, ಮಂಗಳೂರು ತಾ |
| 75. | ಮೆಟ್ರೋಬೀಡಿ ವರ್ಕ್ಸ್, ಗುರುಪುರ, ಮಂಗಳೂರು ತಾ |
| 76. | ದೇಸಾಯಿ ಬ್ರದರ್ಸ್ ಲಿ. ಚಿಲಿಂಬಿ, ಮಂಗಳೂರು |
| 77. | ಮಂಗಳೂರು ಮುತ್ತು ಬೀಡಿ, ಕೆದಿಲ, ಬಂಟ್ವಾಳ |
| 78. | ಮೆ: ಯೂನೈನ್ ಬೀಡೀಸ್, ಕೊಡಾಜೆ, ಮಾಣಿ, ಬಂಟ್ವಾಳ |
| 79. | ಮಂಗಳೂರು ಗಣೇಶ್ ಬೀಡಿ ವರ್ಕ್ಸ್, ಟೊಬೆಕೊ ಮಿಕ್ಸಿಂಗ್ ಯೂನಿಟ್, ಬಂಟ್ವಾಳ ಮೂಡ, ಬಿ.ಸಿ. ರೋಡ್ |
| 80. | ಮಂಗಳೂರು ಎಂ.ಕೆ. ಬೀಡೀಸ್, ಮುನ್ನೂರು, ಮಂಗಳೂರು |
| 81. | ಮಂಗಳೂರು ರೂಬಿ ಬೀಡಿ, ದರ್ಗಾ ರೋಡ್, ಉಳ್ಳಾಲ, ಮಂಗಳೂರು ತಾ |
| 82. | ಸನ್‌ಸ್ಪೆಷಲ್ ಬೀಡಿ, 69 ನಂಬರ್, ಗಾಂಧಿನಗರ ಹೌಸ್, ಕಕ್ಕಿಂಜೆ ಪೋಸ್ಟ್, ಬೆಳ್ತಂಗಡಿ |
| 83. | ಮಂಗಳೂರು ದುರ್ಗಾ ಬೀಡೀಸ್, ಗೋಳ್ತಮಜಲು, ಪುತ್ತೂರು |
| 84. | ಕಣ್ಣಾನೂರು ಬೀಡಿ, ಕೂಳೂರು, ಮಂಗಳೂರು |
| 85. | ಪಿ ಎಂಡ್ ಜೆ ಟೊಬೆಕ್ಕೊ ಪ್ರಾಡಕ್ಸ್, ಪೂಂಜಾಲಕಟ್ಟೆ |

**ಶ್ರೀ ಯು.ಟಿ.ಖಾದರ್**: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹುಶ: ಇವತ್ತುಬೀಡಿ ಕಾರ್ಮಿಕರಿಗೆ ಇರುವಂಥ ಯೋಜನೆಗಳು ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ಸಿಕ್ಕು ಇಂಪ್ಲಿಮೆಂಟಾಗುತ್ತಿಲ್ಲ. ಇದು ಕೇಂದ್ರ ಸರ್ಕಾರದ ಯೋಜನೆ ಆದರೂ ಕೂಡ ಏನು ಸಮಸ್ಯೆ ಇದೆ ಅದು ಇಂಪ್ಲಿಮೆಂಟಾಗುವುದಕ್ಕೆ ಅದನ್ನು ಸರಿಪಡಿಸಲು rules and regulations ಸರಿಪಡಿಸುವುದಕ್ಕೆ ಒಂದು ಜವಾಬ್ದಾರಿ ಇದೆ. ಏಕೆಂದರೆ, ಇದು ಹೌಸಿಂಗ್ ಸ್ಕೀಂ ಎಂದು ಹೇಳಿದ್ದಾರೆ. ಅವನಿಗೆ ಸ್ವಂತ ನಿವೇಶನ ಇರಬೇಕು, ಅವನಿಗೆ ಕೊಡುತ್ತಿರುವುದು 40–50 ಸಾವಿರ ರೂ.ಗಳು, ಸ್ಯಾಲರಿ ಸರ್ಟಿಫಿಕೇಟ್ ಇದರ ಜೊತೆಗೆ ಬೇರೆ ಬೇರೆ ಕಾನೂನು ಹಾಕಿ ಇವತ್ತು ಒಬ್ಬ ಬೀಡಿ ಕಾರ್ಮಿಕನಿಗೆ ಅವನಿಗೆ ತೆಗೆದುಕೊಳ್ಳದಿರುವ ಶಕ್ತಿಯ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಬೀಡಿ ಕಾರ್ಮಿಕರಾಗಿ ಅವರು ಇರಬೇಕಾಗಿಲ್ಲ. ಅವರು ಮುಂದೆ ಕೂಡ ಬೀಡಿ ಕಾರ್ಮಿಕರಾಗಿ ಇರಬಾರದು. ಅವರ ಮಕ್ಕಳು ಬೇರೆ ಬೇರೆ ಉನ್ನತ ಸ್ಥಾನಗಳಿಗೆ ಹೋಗಬೇಕು. ಆದರೆ ಇದ್ದಂಥ ಬೀಡಿ ಕಾರ್ಮಿಕರಿಗೆ ಒಂದು ಸ್ವಾಭಿಮಾನದ ಬದುಕನ್ನು ಮಾಡುವಂಥ ಒಂದು ಅವಕಾಶ ಮಾಡಿ ಕೊಡಬೇಕು ಎಂದು ಕೇಳುತ್ತೇನೆ. ನಿವೇಶನ ಕೊಡುವುದರ ಜೊತೆಯಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, minimum salary ಇವತ್ತು ಕರ್ನಾಟಕ ರಾಜ್ಯದಲ್ಲಿ ಜಾಸ್ತಿ ಇದೆ. West Bengal ದಲ್ಲಿ ಸ್ವಲ್ಪ ಕಡಿಮೆ ಇದೆ. ಇಲ್ಲಿರುವ ಉದ್ಯಮವನ್ನು ಕಡಿಮೆ ಮಾಡಿ ಅಲ್ಲಿ ಪ್ರಾರಂಭ ಮಾಡುವುದರಲ್ಲಿದ್ದಾರೆ. ರಾಷ್ಟ್ರಮಟ್ಟದಲ್ಲಿ ಒಂದೇ ಪಾಲಿಸಿ ಮಾಡಿ ಎಲ್ಲಾ ರಾಜ್ಯಗಳಲ್ಲಿ ಒಂದೇ ತರಹದ ಉತ್ತಮವಾದ ಸ್ಯಾಲರಿ ಮಾಡುವುದಕ್ಕೆ ನಾನು ಒತ್ತಾಯ ಪಡಿಸುತ್ತೇನೆ. ಅದು ಅಗತ್ಯ ಇದೆ. ಅದಕ್ಕಾಗಿ ಇವತ್ತು ಬೀಡಿ ಕಾರ್ಮಿಕರ ಉದ್ದಿಮೆ ಬಂದ್‌ಆಗುವ ಪರಿಸ್ಥಿತಿ ಇದೆ.

**ಅಧ್ಯಕ್ಷರು**: ಅವರು ಉತ್ತರವನ್ನು ಹೇಳಿಲಿ.

**ಶ್ರೀ ಬಿ.ಎನ್.ಬಚ್ಚೇಗೌಡ**: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಬರುವುದು. ಇಲ್ಲಿ ವಿಶೇಷವಾಗಿ ಬೀಡಿ ಕಾರ್ಮಿಕರು ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಅಲ್ಲಿ 85 ರಿಜಿಸ್ಟ್ರೇಷನ್ ಆಗಿರತಕ್ಕಂಥ ಬೀಡಿ ಫ್ಯಾಕ್ಟರಿಗಳು ಇವೆ. ರಾಜ್ಯದಲ್ಲಿ ಒಟ್ಟು

260 ಇವೆ. ನಿಮ್ಮಲ್ಲಿ ಬೀಡಿ ಕೆಲಸ ಮಾಡತಕ್ಕಂಥ ಕಾರ್ಮಿಕರು ತಮಗೆ ಗೊತ್ತಿದೆ, ಸುಮಾರು 90 ಭಾಗ ಗೃಹ ಕೈಗಾರಿಕೆಗಳ ತರಹ ಮಾಡುತ್ತಿದ್ದಾರೆ. ಅದರಲ್ಲಿ ಸುಮಾರು 2.70 ಲಕ್ಷ ಜನ ಪಾಸ್‌ಬುಕ್ ತೆಗೆದುಕೊಂಡು ಐಡೆಂಟಿಟಿ ಕಾರ್ಡ್ ತೆಗೆದುಕೊಂಡಿರುವವರು 3 ಲಕ್ಷ ಜನರು ಇದ್ದಾರೆ. ಅದರಲ್ಲಿ ನಿಮ್ಮಲ್ಲೇ ಇರತಕ್ಕಂಥವರು 2.70 ಲಕ್ಷ ಜನರು ಬರುತ್ತಾರೆ. ರಾಜ್ಯದಲ್ಲಿ ಸುಮಾರು 12 ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಚ್ಚಾಗಿ ಮೈಸೂರು, ದಕ್ಷಿಣ ಕನ್ನಡ, ಉಡುಪಿ, ಮಂಡ್ಯ, ಬೆಂಗಳೂರು, ದಾವಣಗೆರೆ, ಹಾವೇರಿ ಕೆಲವು ಜಿಲ್ಲೆಗಳಲ್ಲಿ ಕೆಲಸ ಮಾಡುವಂಥವರು. ಅವರಿಗೆ ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಸಾಕಷ್ಟು ಸವಲತ್ತುಗಳನ್ನು ಕೊಡುತ್ತಿದ್ದಾರೆ. ಅವರ ವಿದ್ಯಾಭ್ಯಾಸ, ಕಲ್ಯಾಣ ಕಾರ್ಯಕ್ರಮಗಳನ್ನು ಅವರಿಗೆ ಖಾಯಿಲೆ ಬಂದಾಗ ಚಿಕಿತ್ಸೆಯ ಸಲುವಾಗಿ ಚಿಕಿತ್ಸಾಲಯಗಳು ಇವೆ. ಆಸ್ಪತ್ರೆಯ ಸಲುವಾಗಿ ತಮ್ಮಲ್ಲಿ ಜಾಗ ಸಿಗಲಿಲ್ಲ. ಅದನ್ನು ಮೈಸೂರಿಗೆ ಶಿಫ್ಟ್ ಮಾಡಿದೆವು. ನಿನ್ನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಇನ್ನು ಎರಡು ಆಸ್ಪತ್ರೆಗಳನ್ನು ಮಂಡ್ಯ ಮತ್ತು ಕೊಳ್ಳೇಗಾಲದಲ್ಲಿ ತೆಗೆಯೋಣವೆಂದು ಹೇಳಿದ್ದಾರೆ. ಹೀಗೆ ಸಂಚಾರಿ ಆಸ್ಪತ್ರೆಗಳು ಎರಡು ಇವೆ. ಅವರಿಗೆ ಸಾಕಷ್ಟು ಕಲ್ಯಾಣ ಕಾರ್ಯಕ್ರಮಗಳಿಗೂ ಅವರೇ ಕಟ್ಟುತ್ತಿರುವ ಸೆಸ್ ಬಗ್ಗೆ ತಮಗೆ ಗೊತ್ತಿದೆ. ಸೆಸ್ ಕಟ್ಟುತ್ತಾರೆ, ಎಕ್ಸೈಸ್ ಡ್ಯೂಟಿ ಎಲ್ಲಾ ಕಟ್ಟುವಂಥದ್ದು ಇದೆ. 20 ಲಕ್ಷಕ್ಕಿಂತ ಹೆಚ್ಚು ಇರುವಂಥ ಬೀಡಿ ಸುತ್ತುವುದು. ಇವತ್ತು ತಮಗೆ ಮಾಹಿತಿ ಇದೆ. ಸುಮಾರು 20 ಕೋಟಿಯಷ್ಟು ಬೀಡಿಯನ್ನು ಸುತ್ತಿ ಕೊಡುವಂಥದ್ದು ನಮ್ಮ ರಾಜ್ಯದಿಂದ ಹೊರಗೆ ಹೋಗುತ್ತದೆ. ತಾವು ಹೇಳಿದಂತೆ, West Bengal ಆ ಕಡೆ 45 ರೂ.ಗಳಿಗೆ ಮಾಡಿ ಬೀಡಿ ಕಾರ್ಮಿಕರು ಕೊಡುವುದರಿಂದ ಇಲ್ಲಿಯ ಬೆಲೆ ಕುಸಿದು ಬೀಳುವ ತರಹ ಮಾಡುವುದು ಇದೆ. ಆದರೂ ಉದ್ಯಮ ಈ ದೃಷ್ಟಿಯಲ್ಲಿ ಉಳಿದುಕೊಂಡು ನಡೆದುಕೊಂಡು ಹೋಗುತ್ತಿದೆ. ಇವತ್ತಿನ ಬೆಲೆಗಳ ಏರಿಕೆಯಿಂದ ಇದು ಆಗಿರುವುದು. ಅವರು ಬೆಲೆ ವಿಷಯದಲ್ಲಿ ತಿಳಿಸಿರುವಂಥದ್ದು ನಾವು 71 ರೂ.ಗಳನ್ನು ಕನಿಷ್ಠ ವೇತನವನ್ನು ಇವತ್ತು ಅವರಿಗೆ ಕೊಡುತ್ತಿದ್ದೇವೆ. 2006 ರಿಂದ ಅವರಿಗೆ ಕನಿಷ್ಠ ವೇತನ ಕೊಡತಕ್ಕಂಥದ್ದು ಒಂದು ಸಾವಿರ ಬೀಡಿಗೆ 71.26 ರೂ.ಗಳು ಇದೆ. ತಮಗೆ ಗೊತ್ತಿದೆ, ಒಂದು ದಿವಸದ ಕೆಲಸವೆಂದು

ಅಲ್ಲ. ಕೈಗಾರಿಕೋದ್ಯಮಿಗಳು, home delivery ಕೊಡುವಂಥ contractor ಗಳು ಇರುತ್ತಾರೆ, ಅಲ್ಲಿ ಅವರೆಲ್ಲಾ ಮಾಡುವಂಥದ್ದೆಲ್ಲಾ ಇದೆ. ಇದಕ್ಕೆ ಕೇಂದ್ರ ಸರ್ಕಾರದ ನಮಗೆ ಕನಿಷ್ಠ ವೇತನವನ್ನು ನಿರ್ಧಾರ ಮಾಡುವಂಥದ್ದು ನಮಗೇ ಇರುವುದರಿಂದ ನಾವು ಈ ಮೂರು ಜನರ ಹತ್ತಿರ ಮಾತನಾಡಿ ಉದ್ಯಮಕ್ಕೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಇವತ್ತು ಉದ್ಯಮದ ಬೆಲೆ ಕುಸಿಯುತ್ತಿದೆ, ಉಪಯೋಗಿಸುವಂಥದ್ದು ಕಡಿಮೆ ಆಗುತ್ತಿದೆ. ಅವರು ಬಂದು ಅವರ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ. ಈ ದೃಷ್ಟಿಯಲ್ಲಿ ಇವತ್ತು ಸಮಗ್ರವಾಗಿ ಚಿಂತನೆ ಮಾಡಬೇಕಾಗುತ್ತದೆ. ತಾವು ಹೇಳಿದಂತೆ ಹೌಸಿಂಗ್‌ಗೆ ಬಹಳ ಕಡಿಮೆ ಹಣ 40 ಸಾವಿರ ರೂ.ಗಳನ್ನು ಅವರಿಗೆ ಫ್ರೀಯಾಗಿ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ನಮ್ಮ ಸರ್ಕಾರ ಅವರಿಗೆ 40 ಸಾವಿರ ರೂ.ಗಳನ್ನು ಲೋನ್ ರೂಪದಲ್ಲಿ ಕೊಡುತ್ತೇವೆ. ಆ ಫಲಾನುಭವಿ 5 ಸಾವಿರ ರೂ.ಗಳನ್ನು ಹಾಕಬೇಕು. ಈಗ ಒಂದು ಲಕ್ಷ ರೂ.ಗಳಲ್ಲಿ ಏನು ಆಗುವುದಿಲ್ಲ. ತಮಗೆ ಗೊತ್ತಿದೆ, ತಮ್ಮ ಜಿಲ್ಲೆಯಲ್ಲಿ ಮನೆ ಕಟ್ಟುವುದಕ್ಕಾಗುವುದಿಲ್ಲ, ಜಾಗವೂ ಸಿಗುತ್ತಿಲ್ಲ. ಅದಕ್ಕಾಗಿ ಮುಖ್ಯವಾಗಿ ಜಿಲ್ಲಾಧಿಕಾರಿಗಳು ಕೊಡುವಂಥ ಭೂಮಿ ಮತ್ತು ನಾವು integrated ಆಗಿ total ಆಗಿ ಇರುವಂಥ ಜಾಗವನ್ನು ಹುಡುಕಿ ಮೈಸೂರು, ಮಂಡ್ಯ ಬೇರೆ ಬೇರೆ ಕಡೆ ಮಾಡಿರುತ್ತೇವೆ. ಅವರಿಗೆ ಕಾಲೋನಿ ಮಾಡುವಂಥ ವ್ಯವಸ್ಥೆ, ಈ ರೀತಿ ಮಾಡಿರುವಂಥದ್ದು ಇದೆ. Central Welfare Commissioner ಗೆ ಬರುತ್ತದೆ, ಇದರ ಬಗ್ಗೆ ತಮಗೆ ಗೊತ್ತಿದೆ. ಕೇಂದ್ರ ಸರ್ಕಾರಕ್ಕೆ ಹೆಚ್ಚು ಜವಾಬ್ದಾರಿ ಇರುವಂಥದ್ದು, ರಾಜ್ಯ ಸರ್ಕಾರದ್ದು ಬಹಳ ಕಡಿಮೆ ಜವಾಬ್ದಾರಿ ಇರುವಂಥದ್ದು ಈ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಇನ್ನು ಮುಂದಿನ ದಿನಗಳಲ್ಲಿ ಅವರಿಗೆ ನಿವೇಶನ ಒದಗಿಸುವುದಕ್ಕೆ ತಾವು ಕೂಡ ಸಹಕಾರ ಕೊಡಬೇಕಾಗುತ್ತದೆ. ನಮಗೆ ಅದಕ್ಕೆ ಜಮೀನು ಬೇಕಾಗುತ್ತದೆ. ಅಲ್ಲಿ ಕಟ್ಟುವಂಥ ಮನೆ ಅಥವಾ ಇರುವಂಥ 60 ಚದರ ಅಡಿಯಲ್ಲಿ ಮನೆಯನ್ನು ಕಟ್ಟಿಕೊಳ್ಳುವಂಥದ್ದು ಆ ಫಲಾನುಭವಿ ಹೆಸರಿನಲ್ಲಿ ಅಥವಾ dependent's ಹೆಸರಿನಲ್ಲಿ ಇರಲಿ, ಅವರಿಗೆ ಇರುವ ನಿಯಮಗಳನ್ನು ಕೇಂದ್ರ ಸರ್ಕಾರ ಸಡಿಲಿಕೆ ಮಾಡಬೇಕಾಗುತ್ತದೆ. ನಿಯಮಗಳನ್ನು ಬಹಳ ಹಾಕಿದ್ದಾರೆ, ಅದನ್ನು fulfil ಮಾಡುವಂಥದ್ದು ಬಹಳ ಕಷ್ಟ. ನನ್ನ ಕ್ಷೇತ್ರಕ್ಕೂ 126 ಮನೆಗಳನ್ನು

ಕೊಟ್ಟಿದ್ದಾರೆ, ಅದನ್ನು ಏನು ಮಾಡುವುದಕ್ಕಾಗುತ್ತಿಲ್ಲ. ಜಿಲ್ಲಾಧಿಕಾರಿಗಳಿಂದ ನಮ್ಮಿಂದ ಇವೆಲ್ಲಾ ತೊಂದರೆ ಆಗುತ್ತಿರುವಂಥದ್ದು. ಇದೆಲ್ಲವನ್ನು ನಾವು ನೀವು ಸರಿಪಡಿಸುವಂಥದ್ದು. ಕುಳಿತು ಮಾತನಾಡೋಣ, ಯಾವಾಗ ಬೇಕಾದರೂ ಬಂದು ಭೇಟಿ ಆಗಿ ಅದರ ಬಗ್ಗೆ ಮಾತನಾಡೋಣ.

**ಶ್ರೀ ಯು.ಟಿ.ಖಾದರ್:** ಮಾನ್ಯ ಅಧ್ಯಕ್ಷರೆ, ಹೌಸಿಂಗ್ ಸ್ಕೀಂ ಬಗ್ಗೆ ನಿವೇಶನ ಕೊಡುವುದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಮಾನ್ಯ ಕಂದಾಯ ಸಚಿವರ ಹತ್ತಿರ ಮಾತನಾಡಿ ನೀವು ಒಂದು ಕಾನೂನನ್ನು ಜಾರಿ ಮಾಡಬಹುದು. ಬಹುಶ: ಪ್ರತಿಯೊಂದು ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಎಷ್ಟು ಎಕರೆ ಸರ್ಕಾರಿ ಜಮೀನು ಇದೆ, ಅದನ್ನು ಬೀಡಿ ಕಾರ್ಮಿಕರ ನಿವೇಶನಕ್ಕೆ ಎಂದು ಕೊಟ್ಟರೆ ಪ್ರಯೋಜನ ಆಗುತ್ತದೆ. ಕನಿಷ್ಠ ವೇತನದ ಬಗ್ಗೆ ತಾವು ಈಗಾಗಲೇ ಹೇಳಿದ್ದೀರಿ. ಒಂದು ಸಾವಿರ ಬೀಡಿ ಕಟ್ಟಿದರೆ 71.26 ರೂ.ಗಳು ಎಂದು. NREGs ಯಲ್ಲಿ 100 ರೂ.ಗಳು ಇರುವುದನ್ನು 125 ರೂ.ಗಳಿಗೆ ಜಾಸ್ತಿ ಆಗಿದೆ. ಇವತ್ತು ನಾವು ಆಲೋಚನೆ ಮಾಡಬೇಕಾಗುತ್ತದೆ. ಒಂದು ಸಾವಿರ ಬೀಡಿ ಕಟ್ಟಿದರೆ ಬರೀ 75 ರೂ.ಗಳು. ಇವತ್ತು ಇದು ಶಿಫಾರಸ್ಸು ಕೂಡ ಜಾಸ್ತಿ ಮಾಡಬೇಕೆಂದು ಆಗಿ ಬಂದಿದೆ. ಇದಕ್ಕೆ ತಾವು ಎಲ್ಲವನ್ನು ನೋಡಿಕೊಂಡು ಬೇಗ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಇವತ್ತು ತಾವು Medical facilities ಬಗ್ಗೆ ಹೇಳಿದಿರಿ. ಇವತ್ತು heart patient ಗೆ ಅವರು re–reimbursement ಮಾಡುತ್ತಾರೆ. Immediate ಆಗಿ heart operation ಮಾಡಬೇಕೆಂದು ಡಾಕ್ಟರ್ ಹೇಳುತ್ತಾರೆ, ಆಗ ಬೀಡಿ ಕಾರ್ಮಿಕರಿಗೆ ಏನು ಸಿಗುವುದಿಲ್ಲ. ನಾನು ಹೋಗಿ ಬೀಡಿ ಕಾರ್ಮಿಕರ ಲೋಕಲ್ ಡಾಕ್ಟರನ್ನು ಭೇಟಿಯಾಗಿ ಅವರ ಶಿಫಾರಸ್ಸು ತೆಗೆದುಕೊಂಡು ಆಸ್ಪತ್ರೆಗೆ ಹೋಗುವುದು ಅದು ನಂತರ ಬರುವುದು. ಡೈರೆಕ್ಟ್ ಹೋದಾಗ ಕೂಡಲೇ ಆಪರೇಷನ್ ಮಾಡಿದರೆ ಅದಕ್ಕೆ re–imbursement ನ್ನು emergency case ಗೂ ಕೂಡ ಮಾಡಬೇಕು. ಎರಡನೆಯದಾಗಿ ಕಿಡ್ನಿ ಮತ್ತು ಕ್ಯಾನ್ಸರ್‌ಗೆ ಅದಕ್ಕೂ ಕೂಡ reimbursement ಆಗಬೇಕು. ಇದಕ್ಕೆ ಏನಾಗಿದೆ ಎಂದರೆ, ನಾವು ದುಡ್ಡು ಕೊಟ್ಟರೆ ಅವರು ಕೊಡುವಂಥದ್ದು. ಬೀಡಿ ಕಾರ್ಮಿಕರಿಗೆ ಇವತ್ತು ದುಡ್ಡು ಖರ್ಚು ಮಾಡುವುದಕ್ಕೆ ಅವರು ಆರ್ಥಿಕವಾಗಿ ಕಷ್ಟವಾಗುತ್ತದೆ. ತಾವು ಇದನ್ನು ಕೂಡ ಸರಿಪಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎನ್.ಬಚ್ಚೇಗೌಡ:** ಮಾನ್ಯ ಅಧ್ಯಕ್ಷರೆ, ತಾವು ತಿಳಿಸಿದ ಹಾಗೆ ಮಾನ್ಯ ಸದಸ್ಯರಿಗೆ ಸಾಕಷ್ಟು ಮಾಹಿತಿಗಳನ್ನು ಕೊಡುವುದಕ್ಕೆ ಸಮಯವಾಗುತ್ತದೆ. ಇದರ ಬಗ್ಗೆ ನಾವು ಚರ್ಚೆ ಮಾಡೋಣ. ತಾವು ಹೇಳಿದಂತೆ reserved Government ಜಮೀನು ಇದ್ದಾಗ, ಬೀಡಿ ಕಾರ್ಮಿಕರಿಗೆ ಪ್ರತ್ಯೇಕವಾದ ಕಾಲೋನಿ ಮಾಡುವಂಥ ಕಾರ್ಯಕ್ರಮಗಳು. ಕೇಂದ್ರ ಸರ್ಕಾರದಿಂದ ಅವರಿಗೆ welfare measures, ಕೇಂದ್ರ ಸರ್ಕಾರ ಕೊಡುವಂಥ benefits ಅವರಿಗೆ ಬೇಗ ತಲುಪುವ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡುವುದರಲ್ಲಿ ನಮ್ಮ ಕರ್ನಾಟಕ ಸರ್ಕಾರದಿಂದ ಮಾಡುವುದನ್ನು ನಾವು ಮಾಡುತ್ತೇವೆ.

**ಅಧ್ಯಕ್ಷರು :** ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣ ಹೆಚ್.ಸಿ. ರವರು 160(969) ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ. ಶ್ರೀ ಡಿ.ಎಸ್. ಸುರೇಶ್ ರವರ ಪ್ರಶ್ನೆ ಸಂಖ್ಯೆ 161(1058). ಶ್ರೀ ಡಿ.ಎಸ್. ಸುರೇಶ್‌ರವರನ್ನು ಪ್ರಶ್ನೆ ಕೇಳುವುದಕ್ಕೆ ಕರೆದಿದ್ದೇನೆ. ಅವರು ಸದನದಲ್ಲಿ ಇಲ್ಲ.

**ಶ್ರೀ ಯು.ಟಿ. ಖಾದರ್ :** ಮಾನ್ಯ ಅಧ್ಯಕ್ಷರೆ,....

**ಅಧ್ಯಕ್ಷರು :** ಮಾನ್ಯ ಸದಸ್ಯರಾದ ಶ್ರೀ ಖಾದರ್‌ರವರು ಮಾತನಾಡುವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. Please..., ನಾನು ಶ್ರೀ ಡಿ.ಎಸ್. ಸುರೇಶ್‌ರವರನ್ನು ಕರೆದಿದ್ದೇನೆ. ಅವರು ಇಲ್ಲ. ಶ್ರೀ ವಿ.ಮುನಿಯಪ್ಪ ರವರ ಪ್ರಶ್ನೆ ಸಂಖ್ಯೆ 162(774) ಅನ್ನು ನಾಳೆ ತೆಗೆದುಕೊಳ್ಳುತ್ತೇನೆ. ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ ರವರೆ ತಾವು ಪ್ರಶ್ನೆಯನ್ನು ಕೇಳಿ.

**ಅರಣ್ಯ ಪ್ರವಾಸಿ ಧಾಮಗಳ ದಿನಗೂಲಿ ನೌಕರರನ್ನು ಖಾಯಂ ಗೊಳಿಸುವುದು**

163(863) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರ್‌ರಾವ್ : ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ;